## ಕೃಷಿ ಸಚಿವಾಲಯ

ವಿಷಯ : ಸಮಗ್ರ ಕೃಷಿ ಪದ್ಧತಿಗೆ ಪ್ರೋತ್ಸಾಹ/ಆದ್ಯತೆ ನೀಡುವ ಬಗ್ಗೆ.

ಓದಲಾಗಿದೆ: 1. ಮಾನ್ಯ ಮುಖ್ಯಮಂತ್ರಿಯವರ 2011-12ನೇ ಸಾಲಿನ ಕೃಷಿ ಆಯವ್ಯಯ ಭಾಷಣ.

2. ಧಾರವಾಡ ಕೃಷಿ ವಿಶ್ವವಿದ್ಯಾಲಯದ ದಿನಾಂಕ: 21-03-2011, 19-04-2011, 02-05-2011 ಮತ್ತು 11-07-2011ರ ಪತ್ರಗಳ ಸಂಖ್ಯೆ: DE/IFSD/590/2011-12

3. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ದಿನಾಂಕ : 01-04-2011, 12-07-2011, ಪತ್ರಗಳ ಸಂಖ್ಯೆ: UASH/IFSD/GOK/35/2011-12.

4. ರಾಯಚೂರು ಕೃಷಿ ವಿಶ್ವವಿದ್ಯಾಲಯದ ದಿನಾಂಕ: 21-05-2011 ಮತ್ತು 12-07-2011ರ ಪತ್ರಗಳ ಸಂಖ್ಯೆ: DR/UASR/IFS/609/2011-12.

ಪ್ರಸ್ತಾವನೆ:

ಮಾನ್ಯ ಮುಖ್ಯಮಂತ್ರಿಯವರು ಮೇಲೆ (1)ರಲ್ಲಿ ಓದಲಾದ ದಿನಾಂಕ: 24-02-2011 ರಂದು ಮಾಡಿದ ಕೃಷಿ ಆಯವ್ಯಯ ಭಾಷಣದ ಕಂಡಿಕೆ-49ರಲ್ಲಿ "ಸಮಗ್ರ ಕೃಷಿಗೆ ಆದ್ಯತೆ" ಕುರಿತಂತೆ ಕೃಷಿ ಆದಾಯವನ್ನು ಹೆಚ್ಚಿಸಲು ಪರಿಪೂರ್ಣವಾದ ಕ್ರಮಗಳನ್ನು ಅನುಸರಿಸುವ ಮೂಲಕ ಕೃಷಿ ವ್ಯವಸ್ಥೆಯನ್ನು ಪುನಃಶ್ಚೇತನಗೊಳಿಸುವ ಅವಶ್ಯಕತೆ ಇದ್ದು ರಾಜ್ಯದಲ್ಲಿ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸುವುದು ಅವಶ್ಯಕವಾಗಿದ್ದು ಮೊದಲ ವರ್ಷದಲ್ಲಿ ಪ್ರಾಯೋಗಿಕವಾಗಿ ಪ್ರತಿ ವಿಶ್ವವಿದ್ಯಾಲಯವು ಕನಿಷ್ಠ 25,000 ಹೆಕ್ಟೇರ್ ಪ್ರದೇಶಗಳಲ್ಲಿ ಈ ಪದ್ಧತಿಯನ್ನು 2011ರ ಮುಂಗಾರಿನಿಂದ ಅನುಷ್ಠಾನಗೊಳಿಸಲಿದ್ದು ರಾಜ್ಯದಲ್ಲಿ ಒಟ್ಟು 1,25,000 ಹೆಕ್ಟೇರ್ ಪ್ರದೇಶದಲ್ಲಿ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲು ಒಟ್ಟು 75.00 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ನೀಡಲಾಗುವುದೆಂದು ಘೋಷಿಸಿರುತ್ತಾರೆ.

ಸಮಗ್ರ ಕೃಷಿ ಪದ್ಧತಿಯನ್ನು ಕೃಷಿ ವಿಶ್ವವಿದ್ಯಾಲಯಗಳ ಮೂಲಕ ರಾಜ್ಯದಲ್ಲಿ ಅಳವಡಿಸುವ ಸಲುವಾಗಿ ರಾಜ್ಯದಲ್ಲಿನ ಬೆಂಗಳೂರು, ಧಾರವಾಡ ಮತ್ತು ರಾಯಚೂರು ಕೃಷಿ ವಿಶ್ವವಿದ್ಯಾಲಯಗಳಿಂದ ಮೇಲೆ (3), (2) ಮತ್ತು (4)ರಲ್ಲಿ ಓದಲಾದ ಪತ್ರಗಳ ಮುಖೇನ ವರದಿಯನ್ನು ಪಡೆದು ಪರಿಶೀಲಿಸಲಾಗಿದೆ.

ಸಮಗ್ರ ಕೃಷಿ ಪದ್ಧತಿಯಲ್ಲಿ ಸುಸ್ಥಿರ ಉತ್ಪಾದನೆ ಮತ್ತು ಆದಾಯ ಹೆಚ್ಚಿಸುವುದು ಹಾಗೂ ರೈತರ ಮತ್ತು ಭೂರಹಿತ ಕಾರ್ಮಿಕರ ಜೀವನ ಮಟ್ಟ ಸುಧಾರಿಸುವ ಮುಖ್ಯೋದ್ದೇಶದಿಂದ ಅಗತ್ಯವಾದ ತರಬೇತಿ, ಸಂಶೋಧನೆ, ತಾಂತ್ರಿಕತೆ ಮತ್ತು ಮಾರುಕಟ್ಟೆಗೆ ಸಂಬಂಧಿಸಿದಂತೆ ಮುಖ್ಯವಾದ ಮಾಹಿತಿಯನ್ನು ಒದಗಿಸುವುದು ಮತ್ತು ವಿವಿಧ ಬೆಳೆಗಳನ್ನು ಬೆಳೆಯುವುದು ಮುಂತಾದ ಕಾರ್ಯಕ್ರಮಗಳ ತೊಡಗಿಕೊಳ್ಳಲು ಈ ಯೋಜನೆಯನ್ನು ರೂಪಿಸಲಾಗಿದೆ.

ಸಮಗ್ರ ಕೃಷಿ ಪದ್ಧತಿಯನ್ನು ಜಾರಿಗೊಳಿಸಲು ರಾಜ್ಯಮಟ್ಟದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಭಿವೃದ್ಧಿ ಆಯುಕ್ತರು, ಪ್ರಧಾನ/ಕಾರ್ಯದರ್ಶಿ (ಕೃಷಿ) ಮತ್ತು ಸಂಬಂಧಪಟ್ಟ ಅಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿ ಮತ್ತು ನಬಾರ್ಡ್ ಸಂಸ್ಥೆಯವರು ರಾಜ್ಯ ಮಟ್ಟದ ನೋಡಲ್ ಸಂಸ್ಥೆಯಾಗಿರುತ್ತದೆ. ಕೃಷಿ ವಿಶ್ವವಿದ್ಯಾಲಯದ ಮಟ್ಟದಲ್ಲಿ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಿರ್ವಹಣಾ ಸಮಿತಿಯಿದ್ದು ಜಿಲ್ಲಾ ಮಟ್ಟದಲ್ಲಿ ಕೃಷಿ ವಿಶ್ವವಿದ್ಯಾಲಯದ ಸಂಬಂಧಪಟ್ಟ ಡೀನ್ ಸ.ಸಂ.ನಿ/ಸ.ವಿ.ನಿ ಅಧ್ಯಕ್ಷತೆಯಲ್ಲಿ ಸಂಯೋಜನಾ ಸಮಿತಿ ಇರುತ್ತದೆ. ಇವರದೇ ಅಧ್ಯಕ್ಷತೆಯ ಸಮಿತಿಯಲ್ಲಿ ಅನುಷ್ಠಾನಗೊಳಿಸುವ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತದೆ. ಈ ಉದ್ದೇಶಕ್ಕಾಗಿ ಕೃಷಿ ವಿಶ್ವವಿದ್ಯಾಲಯಕ್ಕೆ ಸರ್ಕಾರದ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಹೈನುಗಾರಿಕೆ, ಅಭಿವೃದ್ಧಿ, ಸಹಕಾರ, ಮಾರುಕಟ್ಟೆ ಇಲಾಖೆಗಳು, ಕೃಷಿ ಸಂಶೋಧನಾ/ವಿಸ್ತರಣಾ ಕೇಂದ್ರಗಳು, ಬೀಜೋತ್ಪಾದನೆ ಘಟಕಗಳು, ಲೀಡ್ ಬ್ಯಾಂಕುಗಳು, ಕೃಷಿ ವಿಜ್ಞಾನ ಕೇಂದ್ರಗಳು, ರೈತ ಸಂಪರ್ಕ ಕೇಂದ್ರಗಳು ಮುಂತಾದವುಗಳು ಕೃಷಿ ವಿಶ್ವವಿದ್ಯಾಲಯದ ಸಮಿತಿ/ಅಧಿಕಾರಿ ನಿಗದಿಪಡಿಸುವ ಸೂಚನೆಗಳಡಿ ಕಾರ್ಯಕ್ರಮ ಅನುಷ್ಠಾನಕ್ಕೆ ಸಹಕರಿಸಬೇಕಾಗುತ್ತದೆ.

ಸಮಗ್ರ ಕೃಷಿ ಪದ್ಧತಿ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ಪ್ರತಿ ಕೃಷಿ ವಿಶ್ವವಿದ್ಯಾಲಯಕ್ಕೆ 13.00 ಕೋಟಿ ರೂಪಾಯಿಗಳಂತೆ ಒಟ್ಟು 52.00 ಕೋಟಿ ರೂಪಾಯಿಗಳನ್ನು ನಿಗದಿಪಡಿಸುವ ಪ್ರಸ್ತಾವನೆಗೆ ದಿನಾಂಕ: 29-04-2011ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ SLSC ಸಭೆಯಲ್ಲಿ ಅನುಮೋದಿಸಲಾಗಿರುತ್ತದೆ.

### ಸರ್ಕಾರದ ಆದೇಶ ಸಂಖ್ಯೆ: ಕೃತೋಇ 119 ಕೃವಿವಿ 2011, ಬೆಂಗಳೂರು, ದಿನಾಂಕ : 2-08-2011

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಮೇರೆಗೆ ಕರ್ನಾಟಕ ರಾಜ್ಯದಲ್ಲಿ ಸಮಗ್ರ ಕೃಷಿ ಪದ್ಧತಿಯನ್ನು ರಾಜ್ಯದ ಬೆಂಗಳೂರು, ಧಾರವಾಡ ಮತ್ತು ರಾಯಚೂರು ಕೃಷಿ ವಿಶ್ವವಿದ್ಯಾಲಯಗಳ ಮುಂದಾಳತ್ವದಲ್ಲಿ ಹಾಗೂ ಸದರಿ ಕೃಷಿ ವಿಶ್ವವಿದ್ಯಾಲಯಗಳ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲು ಸರ್ಕಾರದ ಅನುಮತಿಯನ್ನು ಈ ಮೂಲಕ ನೀಡಲಾಗಿದೆ.

2. ಮೇಲ್ಕಂಡ ಉದ್ದೇಶಕ್ಕಾಗಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ನಿಗದಿಪಡಿಸಲಾದ ಅನುದಾನವನ್ನು ಪ್ರತ್ಯೇಕವಾಗಿ ಬಿಡುಗಡೆ ಮಾಡಲು ಕ್ರಮವಿಡಲಾಗುವುದು.

3. ಬೆಂಗಳೂರು, ಧಾರವಾಡ ಮತ್ತು ರಾಯಚೂರು ಕೃಷಿ ವಿಶ್ವವಿದ್ಯಾಲಯಗಳು ತಾವುಗಳು ಸಲ್ಲಿಸಿರುವ ವರದಿ-ಮಾಹಿತಿಯಲ್ಲಿ ಒಳಗೊಂಡಿರುವ ಷರತ್ತುಗಳನ್ನು - ನಿಯಮಗಳನ್ನು - ನಿಬಂಧನೆಗಳನ್ನು ಹಾಗೂ ಈ ಸಂಬಂಧದಲ್ಲಿ ದಿನಾಂಕ : 04-07-2011ರಂದು ಸರ್ಕಾರದ ಅಪರ ಕಾರ್ಯದರ್ಶಿ (ಕೃಷಿ)ರವರ ಅಧ್ಯಕ್ಷತೆಯಲ್ಲಿ ದಿನಾಂಕ: 13-07-2011ರಂದು (ಕೃತೋಇ 119 ಕೃವಿವಿ 2011) ನಡೆದ ಸಭೆಯಲ್ಲಿ ನೀಡಿರುವ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮವನ್ನು ಜಾರಿಗೊಳಿಸಲು ನಿರ್ದೇಶಿಸಲಾಗಿದೆ.

4. ಸಮಗ್ರ ಕೃಷಿ ಪದ್ಧತಿಯನ್ನು ಅನುಷ್ಠಾನಗೊಳಿಸುವ-ಪ್ರೋತ್ಸಾಹಿಸುವ ಸಲುವಾಗಿ ಕೃಷಿ ವಿಶ್ವವಿದ್ಯಾಲಯಕ್ಕೆ ಒಳಪಡುವ ವ್ಯಾಪ್ತಿಯಲ್ಲಿನ ಜಿಲ್ಲೆ-ತಾಲ್ಲೂಕು-ಪ್ರದೇಶದಲ್ಲಿರುವ ಎಲ್ಲಾ ಜಿಲ್ಲಾ/ತಾಲ್ಲೂಕು ಪಂಚಾಯತ್ ಕೃಷಿ-ಅಭಿವೃದ್ಧಿ - ಸಹಕಾರ - ತೋಟಗಾರಿಕೆ - ಪಶುಸಂಗೋಪನೆ - ಹೈನುಗಾರಿಕೆ - ಮಾರುಕಟ್ಟೆ ಇಲಾಖೆಗಳು ಹಾಗೂ ಸಹಕಾರ-ಲೀಡ್ ಬ್ಯಾಂಕುಗಳು ಮತ್ತು ಕೃಷಿ ವಿಶ್ವವಿದ್ಯಾಲಯದ ಪ್ರಾದೇಶಿಕ/ಘಟಕ ಸಂಸ್ಥೆಗಳಲ್ಲಿನ ಅಧಿಕಾರಿ-ಸಿಬ್ಬಂದಿಗಳು ಸಹಕರಿಸುವಂತೆ ಈ ಮೂಲಕ ನಿರ್ದೇಶಿಸಲಾಗಿದೆ. ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಈ ಬಗ್ಗೆ

ಸಂಬಂಧಿಸಿದ ಅಧಿಕಾರಿಗಳ ಸಮಿತಿ ರಚಿಸಿ, ಪ್ರತಿ ತಿಂಗಳು ಪ್ರಗತಿ ಪರಿಶೀಲಿಸಲು ಹಾಗೂ ಸಹಯೋಗದಿಂದ, ಇಲಾಖೆಯ ಕಾರ್ಯಕ್ರಮಗಳನ್ನು IFS ವ್ಯಾಪ್ತಿಯಲ್ಲಿ ತೆಗೆದುಕೊಳ್ಳಲು ಸಹಕಾರಿ ಆಗುವಂತೆ ಮಾಡಲು ಸೂಚಿಸಿದೆ.

5. ಕಾರ್ಯಕ್ರಮ ಅನುಷ್ಠಾನಕ್ಕೆ ಅಗತ್ಯವಾದ ಕನಿಷ್ಠ ಸಂಖ್ಯೆಯ ವಾಹನಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳುವಂತೆ ಮತ್ತು 2 ಮೋಟಾರು ಸೈಕಲ್‌ಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಕೈಬಿಡುವಂತೆಯೂ ನಿರ್ದೇಶಿಸಲಾಗಿದೆ.

6. ಸರ್ಕಾರದ ಆರ್ಥಿಕ ಇಲಾಖೆಯ ದಿನಾಂಕ: 02-06-2011ರ ಟಿಪ್ಪಣಿ ಸಂಖ್ಯೆ : FD 253 Exp-4/2011ರಲ್ಲಿ 253 ರಲ್ಲಿ ಮತ್ತು ಯೋಜನಾ ಇಲಾಖೆಯು ದಿನಾಂಕ : 12-07-2011ರ ಟಿಪ್ಪಣಿ ಸಂಖ್ಯೆ : PD 45 PFO 2011ರಲ್ಲಿ ನೀಡಿರುವ ಸಹಮತಿ ಹಾಗೂ ಅಭಿಪ್ರಾಯಗಳ ಮೇರೆಗೆ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಮಂಜುನಾಥ ಪಾಟೀಲ್

ಪಿ.ಆರ್. 2016 ಸರ್ಕಾರದ ಅಧೀನ ಕಾರ್ಯದರ್ಶಿ

ಕೃಷಿ ಇಲಾಖೆ (ಸೇವೆಗಳು)

## ಒಳಾಡಳಿತ ಸಚಿವಾಲಯ

ವಿಷಯ : ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಸೆಕ್ಯುರಿಟಿ ಫೋರ್ಸ್ (KSISF) 2 ಮತ್ತು 3ನೇ ಘಟಕವನ್ನು ರಚಿಸುವ ಬಗ್ಗೆ.

ಓದಲಾಗಿದೆ: (1) ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 05 ಪಿಓಪಿ 2011, ದಿನಾಂಕ: 14-01-2011.

(2) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪತ್ರ ಸಂಖ್ಯೆ:ಆರ್.ಎಲ್.ಎನ್[5]13/2003-04[ಎ], ದಿನಾಂಕ: 14-06-2011

ಪ್ರಸ್ತಾವನೆ:

ಭಯೋತ್ಪಾದಕರು ಹಾಗೂ ನಕ್ಸಲೀಯರ ಭಯೋತ್ಪಾದಕ ಚಟುವಟಿಕೆಗಳನ್ನು ಹಾಗೂ ವಿಧ್ವಂಸಕ ಕೃತ್ಯಗಳನ್ನು ತಡೆಗಟ್ಟಲು 3 ಬೆಟಾಲಿಯನ್‌ಗಳನ್ನು ಒಳಗೊಂಡಿರುವ ಕರ್ನಾಟಕ ಸ್ಟೇಟ್ ಇಂಡಸ್ಟ್ರೀಯಲ್ ಸೆಕ್ಯೂರಿಟಿ ಫೋರ್ಸ್‌ನ್ನು ಮೂರು ಹಂತಗಳಲ್ಲಿ ಸ್ಥಾಪಿಸಲು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ಸಲ್ಲಿಸಿದ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಮೊದಲ ಹಂತದಲ್ಲಿ ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ಪೊಲೀಸ್ ಇಲಾಖೆಯ ನಿಯಂತ್ರಣದಲ್ಲಿ ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಸೆಕ್ಯುರಿಟಿ ಫೋರ್ಸ್ ಘಟಕವನ್ನು 1060 ಬಲವುಳ್ಳ ಅಧಿಕಾರಿ/ಸಿಬ್ಬಂದಿಗಳ ಹುದ್ದೆಗಳೊಂದಿಗೆ ಒಂದು ಬೆಟಾಲಿಯನ್ ರಚಿಸಲು ಮಂಜೂರಾತಿ ನೀಡಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ, ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ಬೆಂಗಳೂರು ಮೆಟ್ರೋಗೆ ಭದ್ರತೆ ಯೋಜನೆಯೊಂದನ್ನು ಸಿ.ಐ.ಎಸ್.ಎಫ್. ಯೋಜಿಸಿದ್ದು, ಈ ಯೋಜನೆಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಪ್ರಸ್ತುತ ಸರ್ಕಾರ ಕರ್ನಾಟಕ ಸ್ಟೇಟ್ ಇಡಸ್ಟ್ರೀಯಲ್ ಸೆಕ್ಯೂರಿಟಿ ಫೋರ್ಸ್‌ಗೆ ಮಂಜೂರು ಮಾಡಿರುವ ಒಂದು ಬೆಟಾಲಿಯನ್‌ನಿಂದ ಬೆಂಗಳೂರು ಮೆಟ್ರೋ ಸೇರಿದಂತೆ ಸರ್ಕಾರದ ಸಂಸ್ಥೆಗಳು, ಖಾಸಗಿ ವಲಯದ ಕಂಪನಿಗಳಿಂದ ಭದ್ರತಾ ವ್ಯವಸ್ಥೆಗಾಗಿ ಬರುವ ಬೇಡಿಕೆಯನ್ನು ನಿರ್ವಹಿಸಲು ಸಾಧ್ಯವಾಗದ ಕಾರಣ ಕರ್ನಾಟಕ ಸ್ಟೇಟ್ ಇಡಸ್ಟ್ರೀಯಲ್ ಸೆಕ್ಯೂರಿಟಿ ಫೋರ್ಸ್ ಘಟಕವನ್ನು ಪೂರ್ಣ ಪ್ರಮಾಣದಲ್ಲಿ ಸ್ಥಾಪನೆ ಮಾಡಲು ಹೆಚ್ಚುವರಿಯಾಗಿ 2 ಬೆಟಾಲಿಯನ್‌ಗಳನ್ನು ಸ್ಥಾಪನೆ ಮಾಡಲು ಕೋರಿರುತ್ತಾರೆ. ಹಾಗೂ ಈ 3 ಬೆಟಾಲಿಯನ್‌ಗಳ ಮೇಲ್ವಿಚಾರಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಐ.ಪಿ.ಎಸ್. ದರ್ಜೆಯ ಅಧಿಕಾರಿ ಅವಶ್ಯಕತೆ ಇದ್ದು, ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಐ.ಪಿ.ಎಸ್. ಹುದ್ದೆಯನ್ನು ಬೆಂಬಲ ಸಿಬ್ಬಂದಿಗಳಾದ 1-ಶೀಘ್ರಲಿಪಿಗಾರರು, 2-ಪೊಲೀಸ್ ಕಾನ್ಸ್‌ಟೇಬಲ್ (ಆರ್ಡರ್ಲಿ), 1-ಚಾಲಕ (ಎ.ಪಿ.ಸಿ. ಚಾಲಕ), 1-ದಲಾಯತ್ ಹಾಗೂ 1-ಸ್ವೀಪರ್ ಹುದ್ದೆಗಳನ್ನು ಸೃಜಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶ ಮಾಡಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 137 ಪಿಓಪಿ 2011, ಬೆಂಗಳೂರು, ದಿನಾಂಕ 05-08-2011**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಪೊಲೀಸ್ ಇಲಾಖೆಯ ನಿಯಂತ್ರಣದಲ್ಲಿ ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಸೆಕ್ಯುರಿಟಿ ಫೋರ್ಸ್ (KSISF) ಎರಡನೇ ಬೆಟಾಲಿಯನ್‌ನ್ನು 2011-12ನೇ ಸಾಲಿನಲ್ಲಿ ಮತ್ತು ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಸೆಕ್ಯುರಿಟಿ ಫೋರ್ಸ್ (KSISF) ಮೂರನೇ ಬೆಟಾಲಿಯನ್‌ನ್ನು 2012-13ನೇ ಸಾಲಿನಲ್ಲಿ ತಲಾ 1060 ಬಲವುಳ್ಳ ಅಧಿಕಾರಿ/ಸಿಬ್ಬಂದಿಗಳ ಹುದ್ದೆಗಳೊಂದಿಗೆ ಈ ಆದೇಶಕ್ಕೆ ಲಗತ್ತಿಸಿದ ಅನುಬಂಧ-Iರಲ್ಲಿ ಸೂಚಿಸಿರುವ ಹುದ್ದೆಗಳೊಂದಿಗೆ ರಚಿಸಲು ಸರ್ಕಾರದ ಮಂಜೂರಾತಿ ನೀಡಿದೆ.

2) ಪ್ರತಿ 2ನೇ ಮತ್ತು 3ನೇ ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಸೆಕ್ಯುರಿಟಿ ಫೋರ್ಸ್(KSISF) ಘಟಕಗಳಿಗೆ ಅಗತ್ಯವಿರುವ ಸಾರಿಗೆ, ವೈರ್‌ಲೆಸ್ ಸಾಧನಗಳು ಹಾಗೂ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳ ಖರೀದಿಗೆ ತಗಲುವ ಅಂದಾಜು ಅನಾವರ್ತಕ ವೆಚ್ಚ ರೂ. 5,99,26,820/-ಗಳನ್ನು [ಐದು ಕೋಟಿ ತೊಂಭತ್ತೊಂಭತ್ತು ಲಕ್ಷ ಇಪ್ಪತ್ತಾರು ಸಾವಿರದ ಎಂಟುನೂರ ಇಪ್ಪತ್ತು ರೂಪಾಯಿಗಳು ಮಾತ್ರ] ಅನುಬಂಧ-IIರಲ್ಲಿ ವಿವರಿಸಿರುವಂತೆ, ಮಂಜೂರಾದ ವಾಹನಗಳ ನಿರ್ವಹಣೆಗಾಗಿ ತಗಲುವ ಅಂದಾಜು ಅನಾವರ್ತಕ ವೆಚ್ಚ ರೂ. 59,28,000/-ಗಳನ್ನು [ಐವತ್ತೊಂಭತ್ತು ಲಕ್ಷ ಇಪ್ಪತ್ತೆಂಟು ಸಾವಿರ ರೂಪಾಯಿಗಳು ಮಾತ್ರ] ಅನುಬಂಧ-III ರಲ್ಲಿ ವಿವರಿಸಿರುವಂತೆ ಹಾಗೂ ಸಮವಸ್ತ್ರ ಮತ್ತು ಕಿಟ್ ಸಾಮಗ್ರಿಗಳ ಖರೀದಿಗೆ ತಗಲುವ ಅಂದಾಜು ವೆಚ್ಚ ರೂ. 14,50,115/-ಗಳನ್ನು [ಹದಿನಾಲ್ಕು ಲಕ್ಷ ಐವತ್ತು ಸಾವಿರದ ಒಂದುನೂರ ಹದಿನೈದು ರೂಪಾಯಿಗಳು ಮಾತ್ರ] ಅನುಬಂಧ-IV ರಲ್ಲಿ ವಿವರಿಸಿರುವಂತೆ 2011-12ನೇ ಸಾಲಿಗೆ ಮತ್ತು 2012-13ನೇ ಸಾಲಿಗೆ ಭರಿಸಲು ಸಹ ಮಂಜೂರಾತಿ ನೀಡಿದೆ.

3) ಮೇಲಿನ ವೆಚ್ಚಗಳಿಗೆ ಹೆಚ್ಚುವರಿ ಅನುದಾನದ ಅಗತ್ಯವಿದ್ದಲ್ಲಿ ಈ ಕುರಿತ ಪ್ರತ್ಯೇಕವಾಗಿ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದೆ. ಸದರಿ ಹೆಚ್ಚುವರಿ ಅನುದಾನದ ಬಿಡುಗಡೆಯನ್ನು ಕಾಯ್ದಿರಿಸಿ 2ನೇ ಮತ್ತು 3ನೇ ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಸೆಕ್ಯುರಿಟಿ ಫೋರ್ಸ್ ಘಟಕಕ್ಕೆ (KSISF)ಗೆ ಬೇಕಾದ ಪೊಲೀಸ್ ಸಿಬ್ಬಂದಿಯ ನೇಮಕ ಮತ್ತು ಅವರಿಗೆ ಸೂಕ್ತ ತರಬೇತಿ ನೀಡಲು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ಕೂಡಲೇ ಅಗತ್ಯ ಕ್ರಮ ತೆಗೆದುಕೊಳ್ಳತಕ್ಕದ್ದು, ಮುಂದುವರೆದು, ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು 2ನೇ ಮತ್ತು 3ನೇ